ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.1131/2021**

| | | | |
|---|---|---|---|
| ಸಾಕ್ಷಿಧಾರರ ಹೆಸರು | : | ಸಾಹೆಬ್ಬಿ ತಾಳಿಕೋಟಿ | ಪಿಡಬ್ಲ್ಯೂ 1 |
| ತಂದೆಃಗಂಡನ ಹೆಸರು | : | ಮೈನುದ್ದೀನ್ | ಸಿಡಬ್ಲ್ಯೂ 1 |
| ವಯಸ್ಸು | : | 37 ವರ್ಷ | |
| ಉದ್ಯೋಗ | : | ಮನೆಕೆಲಸ | |
| ವಾಸಸ್ಥಳ | : | ಹಸನಾಬಾದಿ, ತಾಃ ಹಾನಗಲ್ | |

ದಿನಾಂಕ 27-09-2023 ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಮೈದುನ. ನನ್ನ ಮತ್ತು 1 ನೇ ಆರೋಪಿಯ ಮದುವೆ ದಿನಾಂಕ 22-5-2017 ರಂದು ನಮ್ಮ ಮನೆಯ ಮುಂದೆ ಆಯಿತು. ಮದುವೆಯ ನಂತರ ವಲಿಮಾ ಕಾರ್ಯಕ್ರಮವು ಎ ಎಫ್ ಎಸ್ ಹಾಜಿರಾ ಪ್ಯಾಲೇಸ್ ಧಾರವಾಡದಲ್ಲಿ ಆಯಿತು. ಮದುವೆಯ ಸಮಯದಲ್ಲಿ ನನ್ನ ತವರು ಮನೆಯಿಂದ 1 ನೇ ಆರೋಪಿಗೆ ರೂ.50,000-00 ನಗದು ಹಣ, ಒಂದು ತೊಲೆ ಬಂಗಾರದ ಉಂಗುರ, ಒಂದೂವರೆ ತೊಲೆ ಬಂಗಾರದ ಬ್ರಾಸಲೆಟ್, ನನಗೆ ಎರಡು ತೊಲೆ ನೆಕಲೇಸ್, ಒಂದುತೊಲೆಯ ಬಂಗಾರದ ಮಂಗಳಸೂತ್ರ, ಅರ್ಧ ತೊಲೆ ಬಂಗಾರದ ಜುಮಕಿ ಮತ್ತು ಬೆಂಡೋಲೆ ಕೊಟ್ಟಿದ್ದರು. ಅದಲ್ಲದೇ ಬಾಂಡೆ ಸಾಮಾನುಗಳು ಮತ್ತು ಬಟ್ಟೆಬರೆಯನ್ನು ಸಹ ಕೊಟ್ಟಿದ್ದರು. ಮದುವೆಯಾದ ದಿನವೇ ನಾನು ಆರೋಪಿತರ ಮನೆಗೆ ಹೋದೆ. 1 ನೇ ಆರೋಪಿಯ ಮನೆಯಲ್ಲಿ 1 ನೇ ಆರೋಪಿ, 2 ನೇ ಆರೋಪಿ, ನನ್ನ ಅತ್ತಿಗೆ ಮುಮತಾಜ ನಾದಿನಿಯರಾದ ವಜಿರಾಬಿ, ಯಾಸ್ಮಿನ್, ಶಕೀಲಾ, ತರನ್ನುಮ ಇದ್ದರು ಹಾಗೂ ಇನ್ನೊಬ್ಬ ಮೈದುನನ ಹೆಂಡತಿಯಾದ ಪರವಿನ್ ಬಾನು ಇದ್ದರು. ಮೇಲೆ ಹೇಳಿದ ನನ್ನ ನಾದಿನಿಯರು, ಮೈದುನರು ಮತ್ತು ಅತ್ತಿಗೆಯರ ಮಾತು ಕೇಳಿ 1 ನೇ ಆರೋಪಿ ನನಗೆ ಬೈಯುವುದು, ಹೊಡೆಯುವುದು ಮಾಡಲು ಪ್ರಾರಂಭಿಸಿದರು. ನನಗೆ ಮನೆಯಲ್ಲಿ ಊಟ ಕೊಡಬೇಡಿ ಎಂದು ಹೇಳಿ ರೂಮಿನಲ್ಲಿ ಕೂಡಿ ಹಾಕುತ್ತಿದ್ದರು. ಮೊಬೈಲ್ ಅಂಗಡಿ ನಡೆಸಲು ಬಂಡವಾಳ ಬೇಕಾಗಿದೆ

ತವರು ಮನೆಯಿಂದ 2 ಲಕ್ಷ ಹಣ ತೆಗೆದುಕೊಂಡು ಬರುವಂತೆ ಬೇಡಿಕೆ ಇಟ್ಟರು. ಘಟನೆಗೂ ಪೂರ್ವದಲ್ಲಿ ನನ್ನ ತವರು ಮನೆಯವರು 1 ನೇ ಆರೋಪಿಗೆ ರೂ.50,000-00 ವನ್ನು ಊರ ಮುಖಂಡರಾದ ಚಾ ಸಾ 8 ಮತ್ತು ನನ್ನ ತವರು ಮನೆಯವರ ಸಮಕ್ಷಮ ಕೊಟ್ಟರು. ಕೊಟ್ಟ ಹಣ ಸಾಕಾಗುವುದಿಲ್ಲ, ಮೊಬೈಲ್ ಅಂಗಡಿಗೆ ಬಂಡವಾಳ ಬೇಕು, ಇನ್ನೂ ಎರಡು ಲಕ್ಷ ತರುವಂತೆ ಹೇಳಿದರು. ಆ ರೀತಿ ಹಣ ತರುವಂತೆ ದಿನಾಂಕ 1-8-2019 ರಂದು ಹೇಳಿದರು. ಆಗ 1 ನೇ ಆರೋಪಿಯು ನನ್ನನ್ನು ಹಣ ತರುವಂತೆ ಹೊಡಿ ಬಡಿ ಮಾಡಿ ತವರು ಮನೆಯಲ್ಲಿ ಬಿಟ್ಟು ಬಂದರು.

2. ದಿನಾಂಕ 22-8-2019 ರಂದು ಸಂಜೆ 5-30 ಸುಮಾರಿಗೆ ನನ್ನ ತಾಯಿಯಾದ ಚಾ ಸಾ 6 ಮತ್ತು ನನ್ನ ಅಕ್ಕನ ಮಗನಾದ ಚಾ ಸಾ 7 ರವರು ನನ್ನನ್ನು ಧಾರವಾಡದಲ್ಲಿರುವ ಆರೋಪಿತರ ಮನೆಗೆ ಕರೆದುಕೊಂಡು ಬಂದರು. ಆಗ ನನ್ನ ತಾಯಿ 1 ನೇ ಆರೋಪಿಯ ಬಳಿ ಅಷ್ಟೊಂದು ಹಣ ಕೊಡಲು ಆಗುವುದಿಲ್ಲ, ಚೆನ್ನಾಗಿ ಜೀವನ ಮಾಡಿಕೊಂಡು ಹೋಗಿ ಎಂದು ಹೇಳಿದರು. ಅಷ್ಟೊಂದು ಹಣ ತಂದರೆ ಮಾತ್ರ ನಿಮ್ಮ ಮಳ ಜೊತೆ ಬಾಳುವೆ ಮಾಡುತ್ತೇನೆ, ಇಲ್ಲದೇ ಇದ್ದರೆ ವಾಪಸ್ಸು ಕರೆದುಕೊಂಡು ಹೋಗಿ, ಇಲ್ಲಿಯೇ ಬಿಟ್ಟರೆ ಜೀವ ತೆಗೆಯುತ್ತೇವೆ ಎಂದು ಹೇಳಿದರು. ಆರೋಪಿತರು ನಮ್ಮನ್ನು ಎಳೆದಾಡಿದರು, ನಾವು ವಾಪಸ್ಸು ಊರಿಗೆ ಬಂದೆವು. ಈ ವಿಷಯವನ್ನು ಊರ ಹಿರಿಯರ ಮುಂದೆ ಹೇಳಿದೆವು. ದಿನಾಂಕ 23-8-2019 ರಂದು ನಾನು ಪೊಲೀಸ್ ಠಾಣೆಗೆ ಹೋದೆ. ಪೊಲೀಸರು ಆರೋಪಿತರಿಗೆ ಕರೆ ಮಾಡಿ ದೂರು ಕೊಡಲು ಬಂದಿದ್ದಾರೆ, ವಿಚಾರಣೆಗೆ ಬರಬೇಕೆಂದು ಹೇಳಿದರು. ಆದರೂ ಸಹ ಆರೋಪಿತರು ಮರುದಿನ ಠಾಣೆಗೆ ಬರಲಿಲ್ಲ. ದಿನಾಂಕ 25-8-2019 ರಂದು ಆರೋಪಿತರನ್ನು ಸೇರಿ ಒಟ್ಟು 8 ಜನ ರಾತ್ರಿ 8 ಗಂಟೆಯ ಸುಮಾರಿಗೆ ನನ್ನ ತವರು ಮನೆಗೆ ಬಂದಿದ್ದರು. ಅವರು ಒಂದು ವಾಹನದಲ್ಲಿ ಬಂದಿದ್ದರು. ಹಣ ತೆಗೆದುಕೊಂಡು ಬಾ ಎಂದು ಹೇಳಿದರೆ ಪೊಲೀಸ್ ಠಾಣೆಗೆದೂರು ಕೊಡಲು ಹೋಗುತ್ತಿಯಾ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದು, ದೂಡಾಡಿ, ಎಳೆದಾಡಿ ನನಗೂ ಚಾ ಸಾ 6 ಮತ್ತು 7 ರವರಿಗೂ ಜೀವದ ಧಮಕಿ ಹಾಕಿದರು. ಈ ವಿಷಯವನ್ನು ನಾನು ಚಾ ಸಾ 8 ಮತ್ತು 11 ರವರಿಗೆ ತಿಳಿಸಲು ಹೋದಾಗ ಅವರು ಬರುವಷ್ಟರಲ್ಲಿ ಆರೋಪಿತರು ಗಾಡಿಯಲ್ಲಿ ವಾಪಸ್ಸು ಹೋದರು. ಮರುದಿನ ನಾನು ಅಂಚೆಯಲ್ಲಿ ಹಾನಗಲ್ ಠಾಣೆಗೆ ಮತ್ತು

ಹಾವೇರಿ ಎಸ್ ಪಿ ಕಚೇರಿಗೆ ದೂರನ್ನು ಕೊಟ್ಟ . ಆದರೂ ಸಹ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ನಂತರ ನಾನು ನ್ಯಾಯಾಲಯಕ್ಕೆ ಬಂದು ಖಾಸಗಿ ದೂರನ್ನು ನೀಡಿದೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿ ಪಿ 1 ಎಂದು, ಅದರಲ್ಲಿ ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿ ಪಿ 1(ಎ) ಎಂದು ಗುರುತಿಸಲಾಯಿತು.

3. ನಾನು ನ್ಯಾಯಾಲಯದಲ್ಲಿ ದೂರನ್ನು ಕೊಟ್ಟ ನಂತರ ದಿನಾಂಕ 26-2-2020 ರಂದು ಪೊಲೀಸರು ಧಾರವಾಡದ ಆರೋಪಿತರ ಮನೆಗೆ ಬಂದಿದ್ದರು, ಆಗ ನಾನು ಹಾಜರಿದ್ದು ಸ್ಥಳ ತೋರಿಸಿದೆ. ಆಗ ಚಾ ಸಾ 4 ಮತ್ತು 5 ರವರು ಪಂಚರಾಗಿ ಹಾಜರಿದ್ದರು. ಅಲ್ಲಿ ಪೊಲೀಸರು ಸಂಜೆ 4 ರಿಂದ 5 ಗಂಟೆಯವರೆಗೆ ಮಹಜರು ಮಾಡಿದರು, ಅದನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಆರೋಪಿತರ ಮನೆಯ ನಕಾಶೆಯನ್ನು ತಯಾರಿಸಿದ್ದಾರೆ, ಅದನ್ನು ಈಗ ನೋಡುತ್ತಿದ್ದು ನಿ ಪಿ 3 ಎಂದು, ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಎರಡು ಭಾವಚಿತ್ರಗಳನ್ನು ತೆಗೆದಿದ್ದಾರೆ, ಅವುಗಳನುನ ನಿ ಪಿ 4 ಮತ್ತು 5 ಎಂದು ಗುರುತಿಸಲಾಯಿತು. ನಿ ಪಿ 2 ರ ಪಂಚನಾಮೆ ಮಾಡುವ ಪೂರ್ವದಲ್ಲಿ ಪೊಲೀಸರು ಹಸನಾಬಾದಿಯ ನನ್ನ ತವರು ಮನೆಗೆ ದಿನಾಂಕ 17-11-2019 ರಂದು ಬಂದು ಪಂಚನಾಮೆ ಮಾಡಿದ್ದಾರೆ. ಆಗ ನಾನು ಸ್ಥಳ ತೋರಿಸಿದ್ದೇನೆ, ಆ ಸಮಯದಲ್ಲಿ ಚಾ ಸಾ 2 ಮತ್ತು 3 ರವರು ಪಂಚರಾಗಿ ಹಾಜರಿದ್ದರು. ಅಲ್ಲಿ ಸಂಜೆ 4-30 ರಿಂದ 6-00 ಗಂಟೆಯವರೆಗೆ ಪಂಚನಾಮೆ ಮಾಡಿದ್ದಾರೆ, ಅದನ್ನು ಈಗ ನೋಡುತ್ತಿದ್ದು ನಿ ಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತಯಾರಿಸಿದ ನಕಾಶೆಯನ್ನು ನಿ ಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ ಪಿ 8 ಮತ್ತು 9 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲ.

ಪಾಟೀ ಸವಾಲು : ಆರೋಪಿತರ ಪರ ಶ್ರೀ. ಆರ್ ಪಿ ಎ ವಕೀಲರಿಂದ

(ಕಾಲಾವಕಾಶ ಕೋರಿದ್ದು ಯಾವುದೇ ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್